ದುರುಮುರುಗಿ ನೆಳಲು
ಹೇ ಬಾಲ ಹೋ ಬಾಲೆ ನುಡಿಗಿಲ್ಲ ಮೈಯ್ಲು

ಚಿಟ್ಟೆ ಬಟ್ಟೆಯ ಚಿಗುರೆ
ಧ್ವಜ ಹೊತ್ತು ನೀ ಎಗುರೆ
ಪಟ್ಟಣಕೆ ಬಂದೀವಿ ಕಿವಿಯೆಲ್ಲೆ ನಿಲ್ಲು
ಬಾಯಿ ಮಾತಿಗ್ಯಾರಿಲ್ಲಿ
ಬಲಿ ಕೊಡರು ತಾಯಿ
ನಡೆ ಮುಂದೆ ಪೇಟೆಗೆ ನಿನದಲ್ಲ ಸೊಲ್ಲು

ಸಾಕವ್ವನ ದನಿಯೆಲ್ಲಿ
ಗಂಗವ್ವನ ಗುಣುಗೆಲ್ಲಿ
ಮುನುಗುವ ಮೂಕಜ್ಜಿ ಕನಸೆಲ್ಲಿ ತಂಗಿ
ಬರಿ ಬಿಂಬ ನಿಂತೈತೆ
ತಳ ಸಡಲಿ ಕುಂತೈತೆ
ಸಮಗಾರ ಭೀಮವ್ವನ ಎದೆಯೆಲ್ಲ ಇಂಗಿ

ಸಿರಿಶೈಲ ಸಂತ್ಯಾಗ
ಕಣ್ಮುಚ್ಚಿ ಕುಂತಾಗ
ನುಡಿದೊಂದ ಪದದಲ್ಲಿ ನನ್ನೂರಿದೆ
ಖ್ವಾಜಾ ನವಾಝರಿಗೆ
ಕಲ್ಲಾನೆ ನವಾಬರಿಗೆ
ನಮಿಸುವ ಹಾಡಿಲ್ಲಿ ಮುನ್ನೂರಿವೆ

ನುಡಿ ನೂರು ಇರಲವ್ವ
ಗಡಿ ಆರು ಇರಲವ್ವ
ಬಡಿವಾರದ ಮಾತು ನುಡಿಬಾರದಿನ್ನೆಂದು
ಹಚ್ಚಿಟ್ಟ ಹಣತೆಗೆ
ಹಂಗ್ಯಾಕ ಗಾಳಿಯದು
ಮುಚ್ಚಿಟ್ಟ ದುಃಖವು ಕೊನೆಯಾಗಲಿಂದು

ಜಜ್ಜನಕ ಜಯಘೋಷ ಕೇಳಿಸಲಿ ಹಿಂಗೆ
ಕಿಂಕಿಣಿಸಿ ಕಿರಗುಡಿಸಿ ಕರು ನೆಗೆದ ಹಂಗೆ

---

'ಕನ್ನಡವೆ ನಮ್ಮಮ್ಮ; ತೆಲುಗು ನಮ್ಮ ದೊಡ್ಡಮ್ಮ' ಎನ್ನುವ ವಾತಾವರಣದ ರಾಯಚೂರಿನಂತಹ ಗಡಿ ಊರಿನ ಸರಕಾರಿ ಶಾಲೆಯಲ್ಲಿ ಓದಿದ ನನಗೆ, ಕನ್ನಡ ಪರಿಚಯವಾಗಿದ್ದು ಮಾತ್ರ ಶಾಲಾ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದ್ದ ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮ', ನಿಸಾರ್ ಅಹಮದ್‌ರ 'ನಿತ್ಯೋತ್ಸವ', ಡಿ.ಎಸ್. ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ' ಮತ್ತು ಮೂಗೂರು ಮಲ್ಲಪ್ಪನವರ 'ಜೋಗದ ಝೋಕು' ಹಾಡುಗವಿತೆಗಳಿಂದಲೆ.

## ಕಾವ್ಯಕ್ಕೆ ಕೇಳುಗರು ಬೇಕು!

ಓದಿದ್ದನ್ನು ತುಂಬಾ ಸರಳವಾಗಿ ನಮ್ಮ ನೆನಪಿನಿಂದ ಅಳಿಸಿಬಿಡಬಲ್ಲ ಇಂದಿನ ವಿದ್ಯುನ್ಮಾನ, ಯಂತ್ರ ಯುಗದಲ್ಲಿ ಗೀತೆಗಳನ್ನು ಬರೆಯುವ ಪ್ರಯತ್ನ ಮಾಡುತ್ತಿದ್ದೇನೆ. ಇದರ ಮುಂದಿನ ಹಾದಿ ಏನೆಂಬುದು ನನಗೂ ಸ್ಪಷ್ಟವಿಲ್ಲ. ನಡೆ ನಡೆಯುತ್ತಲೇ ಹಾದಿ ಮಾಡಿಕೊಳ್ಳಬೇಕಾದ ಜರೂರತ್ತಿನಲ್ಲಿ ನಮ್ಮ ಹೊಸ ತಲೆಮಾರಿದೆ. ಇಂದಿನ ಎಫ್.ಎಂ ರೇಡಿಯೊಗಳು ಕೇಳುಗರನ್ನು ಸೆಳೆಯುತ್ತಿರುವ ಗುಟ್ಟು ಅದರ ಲಯದಲ್ಲಿದೆ. ನಗರ ಕೇಂದ್ರಿತ ಕೇಳುಗರನ್ನ 'ನಾದದ ಗುಲಾಮ'ರನ್ನಾಗಿ ಮಾಡುವ ಶಕ್ತಿ ಇವಕ್ಕೆ ಇದೆ. ಅದು ಸಿನಿಮಾ ಸಂಗೀತಕ್ಕೂ ಇದೆ. ಆ ಪ್ರಕಾರದಲ್ಲಿ ಅಷ್ಟೇ ಪರಿಣಾಮಕಾರಿಯಾಗಿ ಕೇಳಿಸಬಲ್ಲ ಮಾಧ್ಯಮವನ್ನು ಬಳಸಿ ಗಜಲ್ ಅಥವಾ ತತ್ವಪದ, ಗೇಯ ಕವಿತೆಯನ್ನು ಟ್ಯೂನ್ ಮಾಡಿದ್ದೇ ಆದಲ್ಲಿ ಖಂಡಿತಾ ಕನ್ನಡ ಕಾವ್ಯ ತನ್ನ ಕೇಳುಗರನ್ನು ಸೃಷ್ಟಿಸಿಕೊಳ್ಳಬಹುದು.

✿